ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ

ವಾರ್ತಾಪತ್ರ

(ತ್ರೈಮಾಸಿಕ ಪತ್ರಿಕೆ)

ಸಂಪುಟ : ೦೭
ಸಂಚಿಕೆ : ೦೨
೨೬ (ಖಾಸಗಿ ಪ್ರಸಾರಕ್ಕಾಗಿ ಮಾತ್ರ) ಏಪ್ರಿಲ್-ಜೂನ್ ೨೦೧೩

ಸಂಪಾದಕರು
ಎಸ್.ವಿ. ಶ್ರೀನಿವಾಸರಾವ್

ಪರಿವಿಡಿ

೧. ಬಿ.ಎಂ.ಶ್ರೀ. ಬಂಧುಗಳಿಂದ ಅಮೂಲ್ಯ ಕೊಡುಗೆಗಳು/ ೧
೨. ಸಂಪಾದಕೀಯ / ೨
೩. ಪ್ರತಿಷ್ಠಾನದ ವಾರ್ತೆ / ೩
೪. ಪುಸ್ತಕ ಪರಿಚಯ / ೮

ವಿಳಾಸ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ. ಕಲಾಭವನ,
೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ
ಬೆಂಗಳೂರು - ೧೯
ದೂರವಾಣಿ:
೨೬೬೧೫೮೭೭,೨೬೬೭೬೭೭೩
ಇಮೇಲ್ :
bmsritrust@gmail.com
ಶಾಖೆ
ಬಿ.ಎಂ.ಶ್ರೀ. ಶತಮಾನೋತ್ಸವ ಭವನ
ಬೆಳ್ಳೂರು, ನಾಗಮಂಗಲ ತಾ॥ಮಂಡ್ಯ ಜಿಲ್ಲೆ.



ಬಿ.ಎಂ.ಶ್ರೀ ಮೊಮ್ಮಗಳು ಶ್ರೀಮತಿ ಕಮಲಿನಿ ಬಾಲುರಾವ್; ಶ್ರೀಮತಿ ನಾಗರತ್ನ ಎಸ್. ರಾವ್ ಮತ್ತು ಶ್ರೀಮತಿ ವಿಜಯಾ ಎನ್. ರಾವ್ ಅವರುಗಳಿಂದ ಬಿ.ಎಂ.ಶ್ರೀ. ಪ್ರತಿಷ್ಠಾನಕ್ಕೆ ಅಮೂಲ್ಯ ಕೊಡುಗೆಗಳು

ದಿನಾಂಕ :

1. ಬಿ.ಎಂ.ಶ್ರೀ. ಅವರು ಉಪಯೋಗಿಸುತ್ತಿದ್ದ ಪುಟ್ಟ ಟೈಪ್‌ರೇಟರ್.
2. ಶ್ರೀಮನ್ ಕೃಷ್ಣರಾಜೇಂದ್ರ ಒಡೆಯರ್ ಬಹದೂರ್ ಅವರು ದಯಪಾಲಿಸಿರುವ ಪ್ರಸಿದ್ಧ ಪತ್ರಿಕೆಯ 'ರಾಜ ಸೇವಾಸಕ್ತ' ಮೂಲ ಪತ್ರ.
3. ಬಿ.ಎಂ.ಶ್ರೀ. ಅವರಿಗೆ ಅರ್ಪಿತ ಪ್ರಥಮ ಸಂಭಾವನಾ ಗ್ರಂಥ 'ಸಂಭಾವನೆ' ಹಾಗೂ ನೀಡಿದ ಸಂಪುಟ.
4. ಬಿ.ಎಂ.ಶ್ರೀ. ಅವರ ಅಪರೂಪದ ಚಿತ್ರಗಳು.
5. ಬಿ.ಎಂ.ಶ್ರೀ. ಅವರ ಸ್ವಂತ ಪುಸ್ತಕ ಭಂಡಾರದಲ್ಲಿನ ಅಮೂಲ್ಯ ಗ್ರಂಥಗಳು.
6. ಶ್ರೀ. ಶಾ. ಬಾಲುರಾವ್‌ರವರಿಗೆ ಕನ್ನಡನಾಡಿನ ಹಿರಿಯ ಸಾಹಿತಿಗಳು ಬರೆದಿರುವ ಪತ್ರಗಳು.
7. ಖ್ಯಾತ ಚಿತ್ರ ಕಲಾವಿದ ದಿ॥ ಆರ್. ಎಸ್. ನಾಯ್ಡುರವರು ಶ್ರೀ ಬಾಲುರಾವ್ ಅವರಿಗೆ ಕಳುಹಿಸಿರುವ ಪೋಸ್ಟ್‌ಕಾರ್ಡ್ ಚಿತ್ರಗಳು.

ಮೇಲ್ಕಂಡ ಬಂಧುಗಳು ಬಿ.ಎಂ.ಶ್ರೀ. ಅವರ ಹೆಸರಿನಲ್ಲಿ ಒಂದು ದೊಡ್ಡ ಮೊತ್ತದ ಪ್ರಶಸ್ತಿಯನ್ನು ಸಹ ಸ್ಥಾಪಿಸಲು ಇಚ್ಛಿಸುತ್ತಿದ್ದಾರೆ.

ಇವರಿಗೆ ಬಿ.ಎಂ.ಶ್ರೀ ಪ್ರತಿಷ್ಠಾನ ಗೌರವಪೂರ್ಣ ಅಭಿನಂದನೆ ಸಲ್ಲಿಸುತ್ತಿದೆ.

ಸಂಪಾದಕೀಯ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಮುಖ್ಯ ಚಟುವಟಿಕೆಗಳು ಸಂಶೋಧನೆ ಹಾಗೂ ಸಂಶೋಧನ ಕ್ಷೇತ್ರಕ್ಕೆ ಒತ್ತು. ಹಸ್ತಪ್ರತಿಗಳ ಸಂರಕ್ಷಣೆ, ಸಂಪಾದನೆ ಮತ್ತು ಸಂಬಂಧಿಸಿದ ಕಾರ್ಯಗಾರ, ಸಮಾವೇಶಗಳನ್ನು ನಡೆಸುವುದು, ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರಕಿರುವ ಹಿನ್ನೆಲೆಯಲ್ಲಿ ಪ್ರಾಚೀನ ಸಾಹಿತ್ಯದ ಮಹತ್ತನ್ನು ಹೊರತೆಗೆಯುವುದು, ಜನತೆಗೆ ಅದರ ಸಾರ ಸಂಪತ್ತು ಹಾಗೂ ಅಪೂರ್ವ ವೈಶಿಷ್ಟ್ಯತೆಗಳನ್ನು ವಿವರಿಸುವುದು, ಹಾಗೂ ಈ ಕಾರ್ಯಚಟುವಟಿಕೆಗಳಿಗೆ ಪೂರಕವಾದ ಇತರ ಕಾರ್ಯ ಚಟುವಟಿಕೆಯನ್ನು ನಡೆಸುವುದು, ಶೈಕ್ಷಣಿಕ ಕ್ಷೇತ್ರದಲ್ಲಿ ಎಂ.ಫಿಲ್., ಪಿಎಚ್.ಡಿ. ಶಿಕ್ಷಣಕ್ಕೆ ಮಾರ್ಗದರ್ಶನ ತರಗತಿಗಳನ್ನು ನಡೆಸುವುದು. ವರ್ಷಕ್ಕೊಮ್ಮೆ ಶಾಸನ, ಸಂಶೋಧನ ಕ್ಷೇತ್ರಕ್ಕೆ ಸಂಬಂಧಿಸಿದ ಮಾಹಿತಿ ನೀಡುವ ಕಾರ್ಯಗಾರವನ್ನು ತಜ್ಞರ ಮೂಲಕ ನಡೆಸುವುದು, ಹಸ್ತಪ್ರತಿಗಳ ಪ್ರದರ್ಶನ, ಸಂಗ್ರಹ ಮುಂತಾದವುಗಳ ಜೊತೆಗೆ ಹಿರಿಯ ಕಿರಿಯ ಸಾಹಿತಿಗಳ ಬಗ್ಗೆ ಕಿರುಹೊತ್ತಿಗೆ ಹೊರತರುವುದು. ದತ್ತಿ ಕಾರ್ಯಕ್ರಮ, ಸಾಹಿತ್ಯೋಪಾಸಕರು ಲೇಖನ ಮಾಲೆ, ಸಂಗೀತ ಕ್ಷೇತ್ರಕ್ಕೆ ಇಂಬುನೀಡುವ 'ಸಿರಿಸಂಗೀತ' ಮುಂತಾದ ಕಾರ್ಯಕ್ರಮಗಳನ್ನು ಪ್ರತಿ ತಿಂಗಳು ನಡೆಸುವುದು, ಹಾಗೆಯೇ ನಮ್ಮಲ್ಲಿ ಪ್ರಕಟಣೆಗೊಂಡಿರುವ ಪುಸ್ತಕಗಳ ಪ್ರದರ್ಶನ ಆಗಾಗ್ಯೆ ಪ್ರದರ್ಶಿಸುವುದು.

ಸಂಶೋಧನೆಗೆ ಇಂಬು ಕೊಡಲು ವರ್ಷಕ್ಕೊಮ್ಮೆ ಸಂಶೋಧನಾ ಪ್ರಬಂಧ ರಚನಾತ್ಮಕ ಸ್ಪರ್ಧೆಯನ್ನು ನಡೆಸಿ ಇವುಗಳಲ್ಲಿ ಮೂರನ್ನು ಆರಿಸಿ ಅವುಗಳಿಗೆ ಸೂಕ್ತ ವಾರ್ಷಿಕ ಬಹುಮಾನ ನೀಡುವುದು, ಈ ಗ್ರಂಥಗಳ ಪ್ರಕಟಣೆ ಮಾಡಲು ಸಹ ಪ್ರತಿಷ್ಠಾನ ತೀರ್ಮಾನಿಸಿದೆ ಎಂದು ತಿಳಿಸಲು ಹರ್ಷಿಸುತ್ತೇವೆ. ಈ ವರ್ಷದಲ್ಲಿ ಸಂಶೋಧನಾ ಪ್ರಬಂಧಗಳನ್ನು ನವಂಬರ್ ೩೦ ರೊಳಗೆ, ೨೦ ಪುಟಗಳಿಗೆ ಕಡಿಮೆ ಇಲ್ಲದೆ ೧/೪ ಫುಲ್‌ಸ್ಕೇಪು ಪುಟದಲ್ಲಿ) ಕಳುಹಿಸಿಕೊಡಬಹುದಾಗಿದೆ. ಸಂಶೋಧನ ಕೃತಿಗೆ ಯಾವುದೇ ಪ್ರಕಾರದ ನಿರ್ಬಂಧ ಇರುವುದಿಲ್ಲ. ಸಾಹಿತ್ಯ, ಕಲೆ, ವಿಜ್ಞಾನ, ಹೊಸ ತಾಂತ್ರಿಕತೆ ೩, ೨, ೧ ಸಾವಿರ ರೂಪಾಯಿಗಳ ೩ ಪ್ರಶಸ್ತಿಗಳಿರುತ್ತವೆ.

–ಎಸ್. ವಿ. ಶ್ರೀನಿವಾಸರಾವ್
ಸಂಪಾದಕರು

ಪ್ರತಿಷ್ಠಾನದ ವಾರ್ತೆ

ದಿನಾಂಕ : ೧-೪-೨೦೧೩ ಸೋಮವಾರ ಸಂಜೆ ೬-೦೦ ಗಂಟೆಗೆ ಎಂ.ವಿ.ಸೀ. ಸಭಾಂಗಣದಲ್ಲಿ ವೆಂಕಟಪ್ಪ ಮತ್ತು ಜಿ. ಪಿ. ರಾಜರತ್ನಂ ದತ್ತಿ ಕಾರ್ಯಕ್ರಮದ ಅಂಗವಾಗಿ ಕನ್ನಡ ಪ್ರಾಧ್ಯಾಪಕರು, ಖ್ಯಾತ ಸಾಹಿತಿಗಳಾದ ಪ್ರೊ॥ ಎಲ್. ಎನ್. ಮುಕುಂದರಾಜ್ ಅವರಿಂದ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಜಿ. ಪಿ. ರಾಜರತ್ನಂ ಅವರ ಕೊಡುಗೆ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಪ್ರತಿಷ್ಠಾನದ ಅಧ್ಯಕ್ಷರಾದ ಡಾ॥ ಪಿ. ವಿ. ನಾರಾಯಣರವರು ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ಜಯಲಕ್ಷ್ಮೀ ಸತೀಶ್ ಅವರು ಪ್ರಾರ್ಥನೆ ಮಾಡಿ, ಅನಂತರ 'ಸಿರಿಸಂಗೀತ' ಕಾರ್ಯಕ್ರಮ ನಡೆಸಿಕೊಟ್ಟರು. ಕಾರ್ಯದರ್ಶಿ ಶ್ರೀ ಎಸ್. ವಿ. ಶ್ರೀನಿವಾಸರಾವ್ ಎಲ್ಲರನ್ನು ಸ್ವಾಗತಿಸಿದರು. ಪ್ರೊ॥ ಜಿ. ಅಬ್ದುಲ್ ಬಷೀರ್ ಅವರು ಅತಿಥಿಗಳ ಪರಿಚಯ ಮಾಡಿಕೊಟ್ಟರು. ಡಾ॥ ಪಿ. ವಿ. ನಾರಾಯಣ ಅವರು ಅಧ್ಯಕ್ಷಭಾಷಣ ಮಾಡಿ ಎಲ್ಲರಿಗೂ ವಂದನೆ ಸಲ್ಲಿಸಿದರು.

೨೩-೪-೨೦೧೩ ರಂದು ಸಂಜೆ ೬-೦೦ ಗಂಟೆಗೆ ನಡೆದ ದತ್ತಿ ಪ್ರಶಸ್ತಿ ಸಮಾರಂಭದಲ್ಲಿ ಸಾವಿತ್ರಮ್ಮ ದತ್ತಿ ಸಾಹಿತ್ಯ ಪ್ರಶಸ್ತಿಯನ್ನು ಶ್ರೀಮತಿ ಬಿ. ಎಸ್. ಮಯೂರ ಅವರ ಕೃತಿ 'ಬಿ. ರಂಗನಾಯಕಮ್ಮ'ಗೆ ಶಾರದಮ್ಮ ಜಿ. ಹನುಮಯ್ಯ ದತ್ತಿ ಪ್ರಶಸ್ತಿಯನ್ನು (ನಗದು ರೂ. ೧,೦೦೦) ಡಾ॥ ಶ್ಯಾಮಲಾ ರತ್ನಕುಮಾರಿ ಅವರ 'ಮಾನ್ಯಖೇಟದ ರಾಷ್ಟ್ರಕೂಟರು' ಕೃತಿಗೆ, ಮುಖ್ಯ ಅತಿಥಿ ಡಾ॥ ಕೋ. ವೆಂ. ರಾಮಕೃಷ್ಣೇಗೌಡರವರು ವಿತರಿಸಿದರು. (ನಗದು ೧,೦೦೦) ಈ ಸ್ಪರ್ಧೆಗೆ ಶ್ರೀಮತಿ ಎಸ್. ಜಿ. ಮಾಲತಿಶೆಟ್ಟಿ, ಡಾ॥ ಮುಳುಕುಂಟೆ ರಮೇಶ್, ಡಾ। ವಿಜಯಾ ಸುಬ್ಬರಾಜ್, ಡಾ॥ ಎಂ. ಎಲ್. ಲಲಿತಮ್ಮ ತೀರ್ಪುಗಾರರಾಗಿದ್ದರು. ಕಾರ್ಯಕ್ರಮ ಡಾ॥ ಪಿ. ವಿ. ನಾರಾಯಣ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಾರಂಭದಲ್ಲಿ ಶ್ರೀಮತಿ ಮಂಗಳಾರವರಿಂದ ಪ್ರಾರ್ಥನೆ ನಡೆಯಿತು. ಕಾರ್ಯದರ್ಶಿ ಶ್ರೀ ಎಸ್. ವಿ. ಶ್ರೀನಿವಾಸ ರಾವ್‌ರವರು ಸ್ಪರ್ಧೆಯ ಬಗ್ಗೆ ವಿವರ ಮಂಡಿಸಿ ಎಲ್ಲರನ್ನು ಸ್ವಾಗತಿಸಿದರು. ಪ್ರೊ॥ ಜಿ. ಅಬ್ದುಲ್ ಬಷೀರ್‌ರವರು ಅತಿಥಿಗಳ ಪರಿಚಯವನ್ನು ಮಾಡಿಕೊಟ್ಟರು ಅಧ್ಯಕ್ಷ ಡಾ॥ ಪಿ. ವಿ. ನಾರಾಯಣರವರು ಅಧ್ಯಕ್ಷ ಭಾಷಣ ಮಾಡಿ, ಅತಿಥಿಗಳಿಗೆ ವಂದನೆ ಸಲ್ಲಿಸಿ ಅವರಿಗೆ ನೆನಪಿನ ಕಾಣಿಕೆಗಳನ್ನು ನೀಡಿದರು.



೨೩-೪-೨೦೧೩ ದತ್ತಿ ಪ್ರಶಸ್ತಿ ಸಮಾರಂಭ. ಸಾವಿತ್ರಮ್ಮ ದತ್ತಿ ಸಾಹಿತ್ಯ ಪ್ರಶಸ್ತಿ ಮತ್ತು ಶಾರದಮ್ಮ ಜಿ. ಹನುಮಯ್ಯ ದತ್ತಿ

೨೫-೪-೨೦೧೩ ಗುರುವಾರ ಸಂಜೆ ೬-೦೦ ಗಂಟೆಗೆ ದಿ॥ ವೆಂಕಟರಾಮಯ್ಯ-ಪುಟ್ಟಚ್ಚಮ್ಮ ದತ್ತಿನಿಧಿಯಡಿ ಪುಸ್ತಕ ಬಹಮಾನ ಕಾರ್ಯಕ್ರಮ ನಡೆಸಲಾಯಿತು. (ದತ್ತಿ ದಾನಿಗಳು ಎಸ್. ವಿ. ಶ್ರೀನಿವಾಸರಾವ್) ಶ್ರೀಮತಿ ಎಸ್. ಜಿ. ಮಾಲತಿ ಶೆಟ್ಟಿ ಅವರು ರಚಿಸಿರುವ ಕೃತಿ 'ಅನರ್ಘ್ಯರತ್ನ' ಕಥಾ ಸಂಕಲನಕ್ಕೆ ೨,೦೦೦ ರೂ. ನಗದು ಮತ್ತು ಪ್ರಶಸ್ತಿ ಪತ್ರವನ್ನು ಖ್ಯಾತಪತ್ರಕರ್ತ ಶ್ರೀ ಜಿ. ಎನ್. ರಂಗನಾಥರಾವ್‌ರವರು



೨೫-೪-೨೦೧೩ ದಿ॥ ವೆಂಕಟರಾಮಯ್ಯ-ಪುಟ್ಟಚ್ಚಮ್ಮ ದತ್ತಿನಿಧಿ ಕಾರ್ಯಕ್ರಮದಡಿ ಪುಸ್ತಕ ಬಹುಮಾನ

ವಿತರಿಸಿದರು ಈ ಸ್ಪರ್ಧೆಗೆ ಡಾ॥ ಎಸ್. ವಿ. ಪ್ರಭಾವತಿ ಮತ್ತು ಡಾ॥ ಕೆ.ಪಿಅನಂತಪದ್ಮನಾಭರವರು ತೀರ್ಪುಗಾರರಾಗಿದ್ದರು. ಅಂದೇ ಇನ್ನೊಂದು ದತ್ತಿ ಕಾರ್ಯಕ್ರಮ 'ಅನಂತರಂಗ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಿತು. ಡಾ॥ ಹರಿಹರ ಶ್ರೀನಿವಾಸರಾವ್‌ರವರ ಸಂಶೋಧನ ಗ್ರಂಥ **'ಚಾವುಂಡರಾಯನ ಲೋಕೋಪಕಾರದಲ್ಲಿ ಜಾನಪದ ವಿಜ್ಞಾನ ತಂತ್ರಜ್ಞಾನ'** ಪ್ರಶಸ್ತಿಗೆ ಭಾಜನವಾಯಿತು. ಪ್ರೊ॥ ಎಸ್. ಶೇಷಗಿರಿರಾವ್ ಮತ್ತು ಡಾ॥ ಪಿ. ವಿ. ಕೃಷ್ಣಮೂರ್ತಿರವರು ತೀರ್ಪುಗಾರರಾಗಿದ್ದರು.

ಈ ಪ್ರಶಸ್ತಿಯನ್ನು ಶೂದ್ರ ಪತ್ರಿಕೆಯ ಸಂಪಾದಕರು ಹಾಗೂ ಖ್ಯಾತ ಲೇಖಕರಾದ ಶ್ರೀ ಶೂದ್ರ ಶ್ರೀನಿವಾಸ ಅವರು ವಿತರಿಸಿದರು.

ಡಾ॥ ಪಿ.ವಿ. ನಾರಾಯಣ ಅಧ್ಯಕ್ಷತೆ ವಹಿಸಿ, ವಂದಿಸಿದರು. ಪ್ರಾರಂಭದಲ್ಲಿ ಶ್ರೀಮತಿ ಮಂಗಳಾರವರು ಪ್ರಾರ್ಥನೆ ಮಾಡಿದರು. ಶ್ರೀ ಎಸ್. ವಿ. ಶ್ರೀನಿವಾಸರಾವ್ ಎಲ್ಲರನ್ನೂ ಸ್ವಾಗತಿಸಿದರು. ಪ್ರೊ॥ ಅಬ್ದುಲ್ ಬಷೀರ್ ಅತಿಥಿಗಳ ಪರಿಚಯ ಮಾಡಿಕೊಟ್ಟರು.

೨೭-೪-೨೦೧೩ ಸಂಜೆ ೬-೦೦ ಗಂಟೆಗೆ 'ಸಂಶೋಧನ ದಿನ' ಎಂಬ ವಿಶೇಷ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಕನ್ನಡ ವಿಶ್ವವಿದ್ಯಾಲಯ ಹಂಪಿಯ ಮಾನ್ಯತೆ ಪಡೆದು ಎಂ.ಫಿಲ್ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿರುವ ಪ್ರತಿಷ್ಠಾನದ ವತಿಯಿಂದ ಇದರಲ್ಲಿ ಉತ್ತೀರ್ಣರಾದ ೯ ವಿದ್ಯಾರ್ಥಿಗಳಿಗೆ ಪದವಿಪತ್ರ ಪ್ರದಾನ ಮಾಡಲಾಯಿತು. ಖ್ಯಾತ ಸಾಹಿತಿ



೨೭-೪-೨೦೧೩ 'ಸಂಶೋಧನ ದಿನ' ಆಚರಣೆ ಸಂದರ್ಭದಲ್ಲಿ ಎಂ.ಫಿಲ್. ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಹಾಗೂ ಕರ್ನಾಟಕ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾ ಡಾ॥ ಸಿ. ವೀರಣ್ಣರವರು ಪ್ರಶಸ್ತಿ ವಿತರಿಸಿ ಅವರನ ಅಭಿನಂದಿಸಿದರು. ಪ್ರತಿಷ್ಠಾನದ ಸಂಯೋಜನಾಧಿಕಾ ಡಾ॥ ವಿಜಯಾ ಸುಬ್ಬರಾಜ್ ಪ್ರಾರಂಭದಲ್ಲಿ ಈ ತರಗತಿ ಬಗ್ಗೆ ಪ್ರಸ್ತಾವಿಕ ಹಾಗೂ ಸ್ವಾಗತ ಭಾಷಣ ಮಾಡಿದರ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಅಧ್ಯಕ್ಷರಾದ ಡಾ॥ ಪಿ. ನಾರಾಯಣ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮ ಕುಮಾರಿ ಮಾನಸಾರವರ ಪ್ರಾರ್ಥ ಯೊಡನೆ ಪ್ರಾರಂಭವಾಯಿತು. ಶ್ರೀ ಎಸ್.ವಿ. ಶ್ರೀನಿವಾ ರಾವ್ ಕೊನೆಯಲ್ಲಿ ಎಲ್ಲರನ್ನೂ ವಂದಿಸಿದರು.

೨೯-೪-೨೦೧೩ ಸಂಜೆ ೬-೦೦ಕ್ಕೆ ಪ್ರೊ॥ ಎಂ. ಸೀತಾರಾಮಯ್ಯ ಅವರ ತೈಲಚಿತ್ರ ಅನಾವರಣ ಮ



೨೯-೪-೨೦೧೩ ಸೋಮವಾರ ಸಂಜೆ ೬-೦೦ ಗಂಟೆಗೆ ನಡೆದ ಪ್ರೊ॥ ಎಂ. ವಿ. ಸೀತಾರಾಮಯ್ಯ ಅವರ ತೈಲಚಿತ್ರ ಅನಾವರಣ ಮತ್ತು 'ಹೂದನಿ' ಭಾವಗೀತೆ ಧ್ವನಿಸುರಳಿ ಬಿಡುಗಡೆ ಕಾರ್ಯಕ್ರಮ

'ಹೂದನಿ' ಭಾವಗೀತೆಗಳ ಧ್ವನಿಸುರುಳಿ ಬಿಡುಗ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಪ್ರಾರ್ಥನೆ ಶ್ರೀಮ ರಮಾದೇವಿ ವಿಶ್ವೇಶ್ವರಯ್ಯ ಅವರಿಂದ ನಡೆಯಿತು ಪ್ರಾರಂಭದಲ್ಲಿ ಶ್ರೀ ಎಸ್. ವಿ. ಶ್ರೀನಿವಾಸರಾವ್ ಎಲ್ಲ ಅತಿ ಗಳನ್ನು ಸ್ವಾಗತಿಸಿದರು ಹಾಗೂ ಸಭಿಕರನ್ನು ಡಾ॥ ಪಿ. ವಿ ನಾರಾಯಣ ಅವರು ಪ್ರಾಸ್ತಾವಿಕ ನುಡಿಯಲ್ಲಿ ಎಂ.ವಿ.ಸೀ ಅವರ ಕೊಡುಗೆಗಳನ್ನು ಶ್ಲಾಘಿಸಿದರು. ಕರ್ನಾಟಕ ಲಲಿ ಕಲಾ ಅಕಾಡೆಮಿ ಅಧ್ಯಕ್ಷರಾದ ಶ್ರೀ ಚಿ. ಸು. ಕೃಷ್ಣಶೆಟ್ಟಿ ಅವರ ಖ್ಯಾತ ಕಲಾವಿದ ಶ್ರೀ ಚಂದ್ರನಾಥ ಆಚಾರ್ಯ ನಿರ್ಮಿಸಿರುವ ಎಂ.ವಿ.ಸೀ. ತೈಲಚಿತ್ರವನ್ನು ಅನಾವರಣಗೊಳಿಸಿದರು ದೂರದರ್ಶನ ಕೇಂದ್ರದ ಹೆಚ್ಚುವರಿ ಮಹಾನಿರ್ದೇಶಕರಾದ

ಡಾ॥ ನಾಡೋಜ ಮಹೇಶ ಜೋಶಿ ಅವರು 'ಹೂದನಿ' ಧ್ವನಿ ಸುರುಳಿಯನ್ನು ಬಿಡುಗಡೆಗೊಳಿಸಿ, ಎಂ.ವಿ.ಸೀ. ಅವರ ಬಗ್ಗೆ ಶೀರ್ಷದಲ್ಲೇ ದೂರದರ್ಶನ ಕೇಂದ್ರದಲ್ಲಿ ಸೂಕ್ತ ಕಾರ್ಯಕ್ರಮವನ್ನು ನಡೆಸುವ ಆಶ್ವಾಸನೆ ನೀಡಿದರು.

ಈ ಧ್ವನಿಸುರುಳಿಯನ್ನು ನಿರ್ಮಿಸಿರುವ ಶ್ರೀ ಉಪಾಸನಾ ಮೋಹನ್ ಹಾಗೂ ಧ್ವನಿಸುರುಳಿಯಲ್ಲಿ ಹಾಡಿರುವ ಕಲಾವಿದರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ಗೀತೆಗಳನ್ನು ಪ್ರಸ್ತುತಪಡಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗೌರವ ಅಧ್ಯಕ್ಷರಾದ ಪ್ರೊ॥ ಎಂ. ಎಚ್. ಕೃಷ್ಣಯ್ಯ ಅವರು ವಹಿಸಿದ್ದರು.

೩-೫-೨೦೧೩ ಸಂಜೆ ೬-೦೦ ಗಂಟೆಗೆ ಓದು-ಬರಹ ಬಳಗ; ಇತಿಹಾಸ ದರ್ಪಣ ಹಾಗೂ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನಗಳು ಸಂಯುಕ್ತವಾಗಿ ಡಾ॥ ಅ. ಲ. ನರಸಿಂಹನ್ ಶ್ರದ್ಧಾಂಜಲಿ ಕಾರ್ಯಕ್ರಮ ಏರ್ಪಡಿಸಿದ್ದವು. ಕಾರ್ಯ ಕ್ರಮದಲ್ಲಿ ಪ್ರೊ॥ ಕಾ.ವೆಂ. ರಾಜಗೋಪಾಲ್, ಡಾ॥ ದೇವರಕೊಂಡರೆಡ್ಡಿ; ಡಾ॥ಕೆ. ವಸಂತಲಕ್ಷ್ಮೀ ಶ್ರೀ ಡಿ. ವಿ. ಪ್ರಹ್ಲಾದ್‌ರವರು ಮೃತ ರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿದರು. ಪ್ರೊ॥ ಎಂ.ಎಚ್. ಕೃಷ್ಣಯ್ಯ ಅಧ್ಯಕ್ಷತೆ ವಹಿಸಿದ್ದರು.



ಅ. ಲ. ನರಸಿಂಹನ್
ಶ್ರದ್ಧಾಂಜಲಿ ಕಾರ್ಯಕ್ರಮ
ದಿನಾಂಕ : ೩-೫-೨೦೧೩

ಸಭೆಯ ಸಲಹೆಯಂತೆ ನರಸಿಂಹನ್ ಬಗ್ಗೆ ಒಂದು ಗ್ರಂಥವನ್ನು ರಚಿಸಲು ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಒಪ್ಪಿಗೆ ನೀಡಿ, ಇದರ ಸಂಪಾದಕತ್ವವನ್ನು ಡಾ॥ ದೇವರಕೊಂಡಾರೆಡ್ಡಿಯವರಿಗೆ ವಹಿಸಿ ಕೊಟ್ಟರುತ್ತದೆ.

೧೬-೫-೨೦೧೩ ಕೊರಟಿ ಶ್ರೀನಿವಾಸರಾವ್ ಸ್ಮಾರಕ ದತ್ತಿ ಕಾರ್ಯಕ್ರಮವನ್ನು ಸಂಜೆ ೬-೦೦ ಗಂಟೆಗೆ ಏರ್ಪಡಿಸಿತ್ತು. ಟ್ಯಾಗೋರ್ ನ್ಯಾಷನಲ್ ರೀಸರ್ಚ್ ಸಂಸ್ಥೆಯ ಡಾ॥ ಎಂ. ಎಸ್. ಆಶಾದೇವಿಯವರು ಪ್ರೊ॥ ಪಿ. ಲಂಕೇಶ್‌ರವರ 'ಮುಸ್ಸಂಜೆ ಕಥಾ ಪ್ರಸಂಗ' ಕೃತಿಯ ಬಗ್ಗೆ ಉಪನ್ಯಾಸ ನೀಡಿದರು. ಕ್ಯಾಪ್ಟನ್ ಕೆ. ಎಸ್. ಗಾಯಿತ್ರಿಯವರು ತಮ್ಮ ತಂದೆಯವರ ಅಪೂರ್ವ ಕೊಡುಗೆಗಳನ್ನು ನೆನಪಿಸಿಕೊಂಡು ಅವರನ್ನು ವಂದಿಸಿದರು. ಪ್ರತಿಷ್ಠಾನದ ಅಧ್ಯಕ್ಷರಾದ ಡಾ॥ ಪಿ. ವಿ. ನಾರಾಯಣ ಅಧ್ಯಕ್ಷತೆ ವಹಿಸಿದ್ದರು.

ಪ್ರಾರಂಭದಲ್ಲಿ ಶ್ರೀ ಎಸ್. ವಿ. ಶ್ರೀನಿವಾಸರಾವ್‌ರವರು ದತ್ತಿ ಕಾರ್ಯಕ್ರಮಗಳ ಬಗ್ಗೆ ವಿವರ ನೀಡಿ, ಶ್ರೀ ಸಿ. ಕೆ. ನಾಗರಾಜರಾಯರ ಸಾಹಿತ್ಯ ಕೊಡುಗೆಗಳನ್ನು ಶ್ಲಾಘಿಸಿದರು. ಪ್ರೊ॥ ಅಬ್ದುಲ್ ಬಷೀರ್‌ರವರು ವಂದನಾರ್ಪಣೆ ಸಲ್ಲಿಸಿದರು.



೧೯-೫-೨೦೧೩ ಸೂ.ವೆಂ. ಆರಗ ದತ್ತಿ ಕಾರ್ಯಕ್ರಮ ಮತ್ತು
ಸೂ.ವೆಂ. ಆರಗ ಕೃತಿಗಳ ಲೋಕಾರ್ಪಣೆ

೧೯-೫-೨೦೧೩ ಭಾನುವಾರ ಸಂಜೆ ೫-೩೦ಕ್ಕೆ ಸೂ.ವೆಂ. ಆರಗ ದತ್ತಿ ಕಾರ್ಯಕ್ರಮ ಹಾಗೂ ಸೂ. ವೆಂ. ಆರಗರವರ ಕೃತಿಗಳ ಲೋಕಾರ್ಪಣ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಖ್ಯಾತ ವಿಮರ್ಶಕ ಡಾ॥ ಎಂ. ಚಿದಾನಂದಮೂರ್ತಿಯವರು 'ಬರಹದ ಸುತ್ತಮುತ್ತ' ಕುಸುಮ ಸಂಕೋಲೆ'- ಹಾಗೂ 'ವಿಫಲಯಾತ್ರೆ' ಕೃತಿಗಳನ್ನು ಲೋಕಾರ್ಪಣಗೊಳಿಸಿದರು. ದತ್ತಿ ಉಪನ್ಯಾಸವಾಗಿ 'ನೇಪಾಳ - ಹಂಪಿ ನೋಡಿದೆ-ಕಂಡೆ' ಸಂಶೋಧನಾತ್ಮಕ ಉಪನ್ಯಾಸ ಮಾಡಿದರು. ಬಿಡುಗಡೆಗೊಂಡ ಕೃತಿಗಳ ಬಗ್ಗೆ ಕ್ರಮವಾಗಿ ಪ್ರೊ॥ ಹಿ. ಮ. ಬಸವಯ್ಯ; ಡಾ॥ ಸಾ. ಶಿ. ಮರುಳಯ್ಯ, ಪ್ರೊ॥ ಅ. ರಾ. ಮಿತ್ರ ಮಾತನಾಡಿ ಕೃತಿಯ ವೈಶಿಷ್ಟ್ಯಗಳನ್ನು ವಿವರಿಸಿದರು. ಪ್ರತಿಷ್ಠಾನದ ಅಧ್ಯಕ್ಷರಾದ ಡಾ॥ ಪಿ. ವಿ. ನಾರಾಯಣ ಅಧ್ಯಕ್ಷತೆ ವಹಿಸಿದ್ದು ಕೊನೆಯಲ್ಲಿ ಅಧ್ಯಕ್ಷ ಭಾಷಣ ಮಾಡಿ ಅತಿಥಿಗಳಿಗೆ ಪ್ರತಿಷ್ಠಾನದ ನೆನಪಿನ ಕಾಣಿಕೆ ನೀಡಿ ವಂದಿಸಿದರು.

ದಿ॥ ಸೂ. ವೆಂ. ಅರಗರವರ ಪುತ್ರ ಶ್ರೀ ರಮೇಶ್ ತಂದೆಯ ನೆನಪುಗಳನ್ನು ಮೆಲುಕು ಹಾಕುತ್ತ ಅವರ ಸೃಜನಾತ್ಮಕ ಶಕ್ತಿಯನ್ನು ಕೊಂಡಾಡಿದರು. ತಂದೆಯ ಹೆಸರಿನಲ್ಲಿ ಪ್ರತಿವರ್ಷವೂ ಒಂದು ಪ್ರಶಸ್ತಿ ನೀಡಲು ಅನುಕೂಲವಾಗುವಂತೆ ಹಣ ಠೇವಣಿ ಇಡುವ ಬಗ್ಗೆ ವಾಗ್ದಾನ ಮಾಡಿದರು. ಪ್ರಾರಂಭದಲ್ಲಿ ಕಾರ್ಯದರ್ಶಿ ಶ್ರೀ ಎಸ್. ವಿ. ಶ್ರೀನಿವಾಸರಾವ್ ಅತಿಥಿಗಳನ್ನು ಸ್ವಾಗತಿಸಿದರು. ಪ್ರೊ॥ ಜಿ. ಅಬ್ದುಲ್ ಬಷೀರ್ ಅತಿಥಿಗಳ ಪರಿಚಯ ಮಾಡಿಕೊಟ್ಟರು.

ದಿನಾಂಕ : ೨೬-೫-೨೦೧೩ ರಂದು ಪ್ರತಿಷ್ಠಾನ 'ನೂರರ ನಾಡೋಜ ಪ್ರೊ॥ ಜಿ. ವೆಂಕಟಸುಬ್ಬಯ್ಯ ಅವರಿಗೆ ಸನ್ಮಾನ ಹಾಗೂ ಗೋಷ್ಠಿ ಗೌರವ ಎಂಬ ವಿಶೇಷ ಕಾರ್ಯಕ್ರಮ ಆಯೋಜಿಸಿತ್ತು. ಬಸವನಗುಡಿ ಶಾಸಕ ಶ್ರೀ ರವಿಸುಬ್ರಹ್ಮಣ್ಯ



ನೂರರ ನಾಡೋಜ ಪ್ರೊ॥ ಜಿ. ವೆಂಕಟಸುಬ್ಬಯ್ಯ ಅವರಿಗೆ ಸನ್ಮಾನ ಗೋಷ್ಠಿಗೌರವ. ದಿನಾಂಕ : ೨೬-೫-೨೦೧೩

ಅವರು ನಾಡೋಜ ಅವರಿಗೆ ಶಾಲು ಹೊದಿಸಿ, ಫಲಪುಷ್ಪ ಹಾಗೂ ನೆನಪಿನ ಕಾಣಿಕೆ ನೀಡಿ ಅಭಿನಂದಿಸಿದರು.

ಗೋಷ್ಠಿ ಕಾರ್ಯಕ್ರಮಗಳ ಅಂಗವಾಗಿ ಡಾ॥ ಶ್ರೀರಾಮ ಭಟ್ಟ ಅವರಿಂದ 'ನಾಡೋಜ ಜಿ. ವೆಂಕಟಸುಬ್ಬಯ್ಯ ಅವ ವಿದ್ವತ್ ಕೃತಿಗಳು' ಬಗ್ಗೆ, ಶ್ರೀ ಜಿ. ಕೆ. ಗುಂಡೂರಾವ್, ಮಾಜಿ ಕಾರ್ಯದರ್ಶಿಗಳು ಕನ್ನಡ ಸಾಹಿತ್ಯ ಪರಿಷತ್ತು ಅವರಿಂದ 'ನಾಡೋಜ ಪ್ರೊ॥ ಜಿ. ವೆಂಕಟಸುಬ್ಬಯ್ಯ ಕನ್ನಡ ಸಾಹಿತ್ಯ ಪರಿಷತ್ತು ಸಂಬಂಧ' ಕುರಿತು ಡಾ॥ ನಳಿನಿ ವೆಂಕಟೇಶ್ ರವರಿಂದ 'ಪ್ರೊ॥ ಜಿ. ವೆಂಕಟಸುಬ್ಬಯ್ಯ-ಅಧ್ಯಾಪಕರಾಗಿ,' ವಿದ್ವತ್‌ಪೂರ್ಣ ಹಾಗೂ ಆತ್ಮೀಯವಾದ ವಿಷಯಗಳನ್ನು ಮಂಡಿಸಿದರು. ಪ್ರೊ॥ ಎಂ. ಎಚ್. ಕೃಷ್ಣಯ್ಯ, ಗೌ॥ ಅಧ್ಯಕ್ಷರು ಬಿ.ಎಂ.ಶ್ರೀ. ಪ್ರತಿಷ್ಠಾನ, ಅವರು ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದ ಪ್ರಾರಂಭದಲ್ಲಿ ಕಾರ್ಯದರ್ಶಿ ಶ್ರೀ ಎಸ್. ವಿ. ಶ್ರೀನಿವಾಸರಾವ್, ನಾಡೋಜ ಜಿ. ವೆಂಕಟಸುಬ್ಬಯ್ಯ ಮತ್ತು ಪ್ರತಿಷ್ಠಾನದ ಸಂಬಂಧ ಕುರಿತು ವಿವರಣೆ ನೀಡಿದುದಲ್ಲದೆ ಅವರ ವಿದ್ವತ್ತು ಹಾಗೂ ಕೊಡುಗೆಗಳನ್ನು ಸ್ತುತಿಸಿ ಅವರಿಗೆ ಪ್ರತಿಷ್ಠಾನದ ಪರವಾಗಿ ಅಭಿನಂದನೆ ಸಲ್ಲಿಸಿದರು. ಶಾಸಕರ ಉದಾರ ಕೊಡುಗೆಯನ್ನು ನೆನೆಸಿಕೊಂಡರು. ಪ್ರೊ॥ ಅಬ್ದುಲ್ ಬಷೀರ್ ಉಳಿದ ಅತಿಥಿಗಳ ಪರಿಚಯ ಮಾಡಿಕೊಟ್ಟರು. ಡಾ॥ ಪಿ. ವಿ. ನಾರಾಯಣ ಅವರು ಎಲ್ಲರನ್ನು ವಂದಿಸಿದರು. ಶಾಸಕ ಶ್ರೀ ರವಿಸುಬ್ರಹ್ಮಣ್ಯ ಅವರು ಮಾತನಾಡುತ್ತಾ ಸಭಾಂಗಣಕ್ಕೆ ಆದಷ್ಟು ಶೀಘ್ರದಲ್ಲಿ ಎ.ಸಿ. ವ್ಯವಸ್ಥೆಯನ್ನು ಅಳವಡಿಸಿಕೊಡುವ ಆಶ್ವಾಸನೆ ನೀಡಿದರು. ಸಭಿಕರೆಲ್ಲಾ ಕರತಾಡನದಿಂದ ಈ ಹೇಳಿಕೆಯನ್ನು ಸ್ವಾಗತಿಸಿ ಹರ್ಷ ವ್ಯಕ್ತಪಡಿಸಿದರು.



ಪ್ರೊ॥ ಕೆ. ವಿ. ರಾಘವಾಚಾರ್ ದತ್ತಿ ಕಾರ್ಯಕ್ರಮ
ದಿನಾಂಕ : ೫-೬-೨೦೧೩

೫-೬-೨೦೧೩ ಬುಧವಾರ ಸಂಜೆ ೬-೦೦ ಗಂಟೆಗೆ ಪ್ರೊ॥ ಕೆ. ವಿ. ರಾಘವಾಚಾರ್ ದತ್ತಿ ಕಾರ್ಯಕ್ರಮ ನಡೆಯಿತು. ಡಾ॥ ಎಚ್. ವಿ. ರವೀಶ್ ಅವರು ದತ್ತಿ ಉಪನ್ಯಾಸಕರಾಗಿ 'ಡಾ॥ ಮೊಯಿಲಿಯವರ ಶ್ರೀರಾಮಾಯಣ ಅನ್ವೇಷಣಂ ಕೃತಿಯಲ್ಲಿನ ವೈಶಿಷ್ಟ್ಯ'ಗಳನ್ನು ಬಹಳ ಚೆನ್ನಾಗಿ ಬಣ್ಣಿಸಿದರು. ಡಾ॥ಪಿ.ವಿ. ನಾರಾಯಣ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದ ಪ್ರಾರಂಭದಲ್ಲಿ ಶ್ರೀಎಸ್.ವಿ. ಶ್ರೀನಿವಾರಾವ್

ಡಾ॥ ಮೊಯಿಲಿಯವರ ಸಾಹಿತ್ಯ ಕೊಡುಗೆಗಳ ಬಗ್ಗೆ ಮಾತನಾಡಿದರು. ಪ್ರೊ॥ ಜಿ. ಅಬ್ದುಲ್ ಬಷೀರ್‌ರವರು ಡಾ॥ ರವೀಶ್‌ರವರ ಪರಿಚಯ ಮಾಡಿಕೊಟ್ಟರು.

೨೦-೬-೨೦೧೩ ಸಾಯಂಕಾಲ ೬-೦೦ಕ್ಕೆ ಪ್ರೊ॥ ಟಿ. ಎಸ್. ವೆಂಕಣ್ಣಯ್ಯ ಸ್ಮಾರಕ ದತ್ತಿ ಮತ್ತು ಡಾ॥ ಶಾಂತಾ ಪ್ರಭುಶಂಕರ ಸ್ಮಾರಕ ದತ್ತಿ ಕಾರ್ಯಕ್ರಮಗಳು ನಡೆದವು. ನಿವೃತ್ತ ಪ್ರಾಂಶುಪಾಲರಾದ ಹಿರಿಯ ಸಂಸ್ಕೃತಿ ಚಿಂತಕ ಡಾ॥ ಸಿ. ಯು. ಮಂಜುನಾಥ್‌ರವರು, ಪ್ರೊ॥ ಟಿ. ಎಸ್. ವೆಂಕಣ್ಣಯ್ಯ ಅವರ ಕೃತಿಗಳ ಬಗ್ಗೆ ಮೌಲಿಕ ಉಪನ್ಯಾಸ ನೀಡಿದರು. ಪ್ರತಿಷ್ಠಾನದ ಅಧ್ಯಕ್ಷರಾದ ಡಾ॥ ಪಿ. ವಿ. ನಾರಾಯಣ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದ ಪ್ರಾರಂಭದಲ್ಲಿ ಎಸ್. ವಿ. ಶ್ರೀನಿವಾಸರಾವ್ ಅವರು ಎಲ್ಲರನ್ನೂ ಸ್ವಾಗತಿಸಿ ಮುಖ್ಯ ಅತಿಥಿಗಳನ್ನು ಪರಿಚಯಿಸಿದರು. ಕೊನೆಯಲ್ಲಿ ಅಧ್ಯಕ್ಷರು ತಮ್ಮ ಅಧ್ಯಕ್ಷ ಭಾಷಣದ ನಂತರ ಮುಖ್ಯ ಅತಿಥಿಗಳಿಗೆ ಪ್ರತಿಷ್ಠಾನದ ಗೌರವ ಕಾಣಿಕೆ ನೀಡಿ ವಂದಿಸಿದರು.

೨೭-೬-೨೦೧೩ ಸಂಜೆ ೬-೦೦ ಗಂಟೆಗೆ 'ಸಾಹಿತ್ಯೋಪಾಸಕರು ಲೇಖನಮಾಲೆ' ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಉಪನ್ಯಾಸಕರಾಗಿ ಶ್ರೀ ಸಂಗಮೇಶ್ ಬಾದವಾಡಗಿ (ಗೌ॥ ಕಾರ್ಯದರ್ಶಿ, ಕನ್ನಡ ಸಾಹಿತ್ಯ ಪರಿಷತ್ತು) ಇವರು ಫ. ಗೂ. ಹಳಕಟ್ಟಿ ಅವರ ಕೃತಿಗಳ ಬಗ್ಗೆ ಪ್ರೊ॥ ಟಿ. ಯಲ್ಲಪ್ಪ (ಕನ್ನಡ ಪ್ರಾಧ್ಯಾಪಕರು, ಕವಿಗಳು) 'ಮುದ್ದಣನ ಜೀವನ ಮತ್ತು ಕೃತಿಗಳು ಕುರಿತು ಉಪನ್ಯಾಸಗಳನ್ನು ನೀಡಿದರು. ಕಾರ್ಯಕ್ರಮದ ಪ್ರಾರಂಭದಲ್ಲಿ ಕಾರ್ಯದರ್ಶಿ ಶ್ರೀ ಎಸ್.ವಿ. ಶ್ರೀನಿವಾಸರಾವ್ ಅವರು ಸಾಹಿತ್ಯೋಪಾಸಕರು ಲೇಖನ ಮಾಲೆಯ ವೈಶಿಷ್ಟ್ಯ ಗಳನ್ನು ತಿಳಿಸಿ ೧೮ನೇ ಶತಮಾನದ ಕವಿ, ಲೇಖಕರನ್ನು ಪರಿಚಯಿಸುವ ಈ ವಿಶಿಷ್ಟಕಾರ್ಯಕ್ರಮ ಕನ್ನಡ ಸಾಹಿತ್ಯ ಜನತೆಗೆ ಅತ್ಯುತ್ತಮ ಆಕರ ಮಾಹಿತಿಯಾಗಿರುವುದು ಎಂದು ಹೇಳಿ ಎಲ್ಲರನ್ನು ಸ್ವಾಗತಿಸಿದರು. ಪ್ರೊ॥ ಜಿ. ಅಬ್ದುಲ್ ಬಷೀರ್ ಅತಿಥಿಗಳ ಪರಿಚಯ ಮಾಡಿಸಿದರು. ಪ್ರತಿಷ್ಠಾನದ ಅಧ್ಯಕ್ಷರಾದ ಡಾ॥ ಪಿ. ವಿ. ನಾರಾಯಣ ಅಧ್ಯಕ್ಷತೆ ವಹಿಸಿದ್ದರು. ಅಧ್ಯಕ್ಷ ಭಾಷಣ ಮಾಡಿದ ಇವರು ಅತಿಥಿಗಳಿಗೆ ನೆನಪಿನ ಕಾಣಿಕೆಯನ್ನು ಅರ್ಪಿಸಿ ವಂದಿಸಿದರು.




ದಿನಾಂಕ ೨೮-೬-೨೦೧೩ ಬಿ.ಎಂ.ಶ್ರೀ. ಬಂಧುಗಳೊಡನೆ ಬಿ.ಎಂ.ಶ್ರೀ. ಅವರ ಕೆಲವು ಅಮೂಲ್ಯ ವಸ್ತುಗಳನ್ನು ಅವರು ಬಿ.ಎಂ.ಶ್ರೀ. ಪ್ರತಿಷ್ಠಾನಕ್ಕೆ ಕೊಡುಗೆ ನೀಡಿದಾಗ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನಕ್ಕೆ ದತ್ತಿದಾನ ಮತ್ತು ದಾನವಾಗಿ ಕೊಟ್ಟವರು

೧. ೨೦-೫-೨೦೧೩ರಂದು **ಶ್ರೀಮತಿ ವಿಮಲಾ ಎ. ಮೂರ್ತಿ** ಅವರು ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನಕ್ಕೆ ೧,೦೦,೦೦೦/- ರೂ.ಗಳನ್ನು ಆರಗ ದತ್ತಿ ದಾನವಾಗಿ ಕೊಟ್ಟಿರುತ್ತಾರೆ.

೧. ೧೭-೪-೨೦೧೩ರಂದು **ಡಾ॥ ಕೆ. ಆರ್. ಗಣೇಶ** ಅವರು ಬಿ.ಎಂ.ಶ್ರೀ. ಸ್ಮಾರಕ್ಕೆ ಪ್ರತಿಷ್ಠಾನಕ್ಕೆ ೮,೦೦೦/- ರೂ.ಗಳನ್ನು ದಾನವಾಗಿ ಕೊಟ್ಟಿರುತ್ತಾರೆ.

೨. ೨೭-೩-೨೦೧೩ರಂದು **ಕೆ. ಪಿ. ಭಟ್** ಅವರು ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನಕ್ಕೆ ೪,೦೦೦ ರೂ.ಗಳನ್ನು ದಾನವಾಗಿ ಕೊಟ್ಟಿರುತ್ತಾರೆ.




ಸಾಹಿತ್ಯೋಪಾಸಕರು ಲೇಖನಮಾಲೆ ಕಾರ್ಯಕ್ರಮ ದಿನಾಂಕ : ೨೭-೬-೨೦೧೩


ಪುಸ್ತಕ ಪರಿಚಯ



೧. ಅನರ್ಘ್ಯ ರತ್ನ : (ಕಥಾಸಂಕಲನ) ಲೇಖಕಿ : ಎಸ್. ಜಿ. ಮಾಲತಿಶೆಟ್ಟಿ, ದಿ॥ ಪುಟ್ಟಚ್ಚಮ್ಮ-ವೆಂಕಟರಾಮಯ್ಯ ಸ್ಮಾರಕ ದತ್ತಿ ಸ್ಪರ್ಧೆಯಲ್ಲಿ ೨೦೧೨ನೇ ಸಾಲಿನಲ್ಲಿ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ನೀಡಿದ ಪುಸ್ತಕ ಬಹುಮಾನ ಸ್ಪಧೆಯಲ್ಲಿ ರೂ. ೨೦೦೦/- ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರಕ್ಕೆ ಪಾತ್ರವಾಗಿದೆ.




೨.ಮಾನ್ಯ ಖೇಟದ ರಾಷ್ಟ್ರಕೂಟರು : ಸಂಶೋಧನ ಕೃತಿ. ಲೇಖಕಿ: ಶ್ಯಾಮಲಾ ರತ್ನಕುಮಾರಿ. ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ೨೦೧೦-೧೧ನೇ ಸಾಲಿನಲ್ಲಿ ನಡೆಸಿದ ಸ್ಪರ್ಧೆಯಲ್ಲಿ ೧೦೦೦ ರೂ.ಗಳ ಪ್ರಶಸ್ತಿ ಗಳಿಸಿದೆ.



೩. ಚಾವುಂಡರಾಯನ ಲೋಕೋಪಚಾರದಲ್ಲಿ ಜಲತಂತ್ರ ಜ್ಞಾನ :ಲೇಖಕರು : ಶ್ರೀ ಹಿರಿಯೂರು ಶ್ರೀನಿವಾಸರಾವ್. ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ೨೦೧೦ನೇ ಸಾಲಿನ ಅನಂತರಂಗ ಪುಸ್ತಕ ಬಹುಮಾನ ಸ್ಪರ್ಧೆಯಲ್ಲಿ ಆಯ್ಕೆಗೊಂಡು, ಬಹುಮಾನ ನಗದು ರೂ.೧೦೦೦/-ಮತ್ತು ಪ್ರಶಸ್ತಿ ಪತ್ರಕ್ಕೆ ಭಾಜನವಾಗಿದೆ. ಚಾವುಂಡರಾಯನ ಕಾಲದಲ್ಲಿ ಜಲತಂತ್ರ ಜ್ಞಾನ ಎಷ್ಟು ಮುಂದುವರಿದಿತ್ತು ಎಂಬುದನ್ನು ಸಾದೋಹರಣವಾಗಿ ಲೇಖಕರು ಕೃತಿಯಲ್ಲಿ ಪ್ರಸ್ತುತ ಪಡಿಸಿರುತ್ತಾರೆ. ಸಂಗ್ರಹಯೋಗ್ಯ ಕೃತಿ.

೪. ಪರ್ಷಿಯನ್ ಕವಿತೆಗಳು : ಅನುವಾದ : ಡಾ॥ ವಿಜಯಾ ಸುಬ್ಬರಾಜ್. ಪ್ರಕಾಶಕರು : ಶುಭದ ಪ್ರಕಾಶನ, ಜರಗನಹಳ್ಳಿ, ಜೆ. ಪಿ. ನಗರ ಅಂಚೆ, ಬೆಂಗಳೂರು-೫೬೦ ೦೭೮. ಪ್ರಥಮ ಮುದ್ರಣ : ೨೦೧೨. ಪುಟಗಳು :೧೦೮ ಬೆಲೆ : ರೂ. ೮೦.



ಪ್ರೊ॥ ಹದಿ ಹಸನ್‌ರವರು ಇಂಗ್ಲೀಷಿಗೆ ಅನುವಾದಿಸಿರುವ 'ಎ ಗೋಲ್ಡನ್ ಟ್ರಷರಿ ಆಫ್ ಪರ್ಷಿಯನ್ ಪೊಯಿಟ್ರಿ'ಯಿಂದ ಪ್ರಭಾವಿತರಾಗಿ ಡಾ॥ ವಿಜಯಾ ಸುಬ್ಬರಾಜ್ ಅವರು ತಮ್ಮ ಅನಿಸಿಕೆಗಳನ್ನು ಕವಿತೆಯ ಮೂಲಕ ಮುಂದಿಟ್ಟಿರುತ್ತಾರೆ. ಹತ್ತನೆಯ ಶತಮಾನದ ಸರಿ ಸುಮಾರಿನಿಂದ ೧೪ನೇ ಶತಮಾನದ ವರೆಗಿನ ಕವಿಗಳ ಕವಿತೆಗಳನ್ನು ಈ ಸಂಗ್ರಹದಲ್ಲಿ ನೀಡಿರುತ್ತಾರೆ. ಕವಿತೆಗಳು ನೈಜ ಸೃಜನಶೀಲ ಕವಿತೆಗಳಂತೆ ನೀಡಿರುವುದು ಲೇಖಕಿಯರ ಪ್ರಬುದ್ಧತೆ ತಿಳಿಸುತ್ತದೆ. ಓದಲು ಉಪಯುಕ್ತ ಕೃತಿ.

ಅಚ್ಚಾದ ಪುಸ್ತಕ ತೆರೆದ-ಅಂಚೆ

ಶ್ರೀಮತಿ/ಶ್ರೀ..............................

....

....

ವಿಳಾಸ
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
ಬಿ.ಎಂ.ಶ್ರೀ. ಕಲಾಭವನ, ೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ, ಬೆಂಗಳೂರು – ೧೯
ದೂರವಾಣಿ : ೨೬೬೧೫೮೭೭

ಮುದ್ರಕರು : ಇಳಾ ಮುದ್ರಣ, ನಂ. ೩೬, ೪೦ ಅಡಿ ರಸ್ತೆ, ರಾಘವನಗರ, ನ್ಯೂ ಟಿಂಬರ್‌ಯಾರ್ಡ್ ಲೇಔಟ್, ಬೆಂಗಳೂರು-೨೬ ✆ ೨೬೭೫೭೧೫೯